**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 794/2022**

**ಚಾ.ಸಾ.** 3

**ಪ್ರಾ.ಸಾ.** 6

**ದಿನಾಂಕಃ24.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಮಲ್ಲಿಕಾರ್ಜುನಯ್ಯ |
| ತಂದೆಃ ಗಂಡನ ಹೆಸರು | ಈರಯ್ಯ |
| ಉದ್ಯೋಗ | ವ್ಯಾಪಾರ |
| ವಯಸ್ಸು | 36 |
| ವಾಸಸ್ಥಳ | ಗದಗ |

**ಪ್ರಾರಂಭ ಸಮಯಃ 12.45. ಪಿ ಎಂ.**

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ಸಾಕ್ಷಿಗೆ ನಿಪಿ2 ಮತ್ತು 3 ನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ತನ್ನ ಸಹಿಗಳನ್ನು ನಿಪಿ2(ಸಿ) ಮತ್ತು 3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ4 ರಿಂದ 6, ಮತ್ತು 9 ಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದರು.

ಸುಮಾರು 2 ವರ್ಷಗಳ ಹಿಂದೆ ಪೊಲೀಸ ಠಾಣೆಯಲ್ಲಿ ನಿಪಿ2 ಮತ್ತು 3 ರಲ್ಲಿ ಸಹಿ ಮಾಡಿದ್ದೇನೆ. ನಿಪಿ2 ಮತ್ತು 3 ರಲ್ಲಿರುವ ಅಂಶಗಳು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಾಹನವನ್ನು ಪೊಲೀಸರು

ಅಮಾನತ್ತು ಪಡೆಸಿಕೊಂಡಿಲ್ಲ. ನಿಪಿ4 ರಿಂದ 6,ಕಿ ಮತ್ತು 9 ನ್ನು ಯಾವ ಕಾರಣಕ್ಕಾಗಿ ತೆಗೆದರು ಎಂದು ಗೊತ್ತಿಲ್ಲ.

ಸಾಕ್ಷಿಗೆ ನಿಪಿ-7 ನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ7 (ಬಿ) ಎಂದು ಗುರುತಿಸಲಾಯಿತು. ನಿಪಿ-7 ರಲ್ಲಿ ಇರುವ ಅಂಶಗಳು ನನಗೆ ಗೊತ್ತಿಲ್ಲ.

**ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸ.ಸ.ಅ ರವರಿಗೆ ಪಾಟೀಸವಾಲು ಮಾಡಲು ಅವಕಾಶ ನೀಡಲಾಯಿತು.**

ದಿಃ 01.04.2021 ರಂದು ನಾನು ನಿಪಿ2 ಸಹಿಮಾಡಿದ್ದೇನೆ ಎಂದರೆ ಸರಿ. ನನ್ನೊಂದಿಗೆ ಪ್ರಾಸಾ-2 ರವರು ಇದ್ದರು ಎಂದರೆ ಸರಿ. ನನ್ನನ್ನು ಮತ್ತು ಪ್ರಾಸಾ-2 ರವರನ್ನು ಪ್ರಾಸಾ 1 ರವರು ತೋರಿಸಿದ ಸ್ಥಳಕ್ಕೆ ಕರೆಸಿದ್ದರು ಎಂರೆ ಸರಿಯಲ್ಲ. ಸದರಿ ಸ್ಥಳದಲ್ಲಿ ನಿಪಿ2 ರಂತೆ ಪಂಚನಾಮೆ ಮಾಡಿ ನಿಪಿ3 ರಂತೆ ನಕಾಶೆಯನ್ನು ತಯಾರು ಮಾಡಿ ನಿಪಿ4 ರಿಂದ 6 ರಂತೆ ಭಾವಚಿತ್ರಗಳನ್ನು ತೆಗೆದು ಸ್ಥಳದಲ್ಲಿ ಇದ್ದಂತಹ ದ್ವಿಚಕ್ರ ವಾಹನವನ್ನು ವಶಪಡೆಸಿಕೊಂಡರು ಎಂದರೆ ಸರಿಯಲ್ಲ.

ಅದೇ ದಿನ ನನ್ನ ಮತ್ತು ಚಾಸಾ 4 ರವರ ಸಮಕ್ಷಮ ಕಲಘಟಗಿಯ ಸರ್ಕಾರಿ ಆಸ್ಪತ್ರೆಯಲ್ಲಿ ಮೃತ ಮಹೇಶ ರವರ ಶವ ಪಂಚನಾಮೆಯನ್ನು ನಿಪಿ7 ರಂತೆ ಜರುಗಿಸಿ ನಿಪಿ8 ಮತ್ತು 9 ರಂತೆ ಭಾವಚಿತ್ರಗಳನ್ನು ತೆಗೆದರು ಎಂದರೆ ಸರಿಯಲ್ಲ. ನಿಪಿ7 ನ್ನು ಬೆಳಿಗ್ಗೆ10.15 ರಿಂದ 11.30 ರವರೆಗೆ ಜರುಗಿಸಿದರು ಎಂದರೆ ಸರಿಯಲ್ಲ. ನಿಪಿ2, 3 ಮತ್ತು 7 ರಲ್ಲಿರುವ ಎಲ್ಲಾ ಅಂಶಗಳು ಗೊತ್ತಿದ್ದರು ಸಹ ಆಪಾದಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆಪಾದಿತನ ಪರ ಶ್ರೀ ಎಂ ಬಿ ಜೆ ವಕೀಲರು ಪಾಟೀಸವಾಲು ಇಲ್ಲ ಎಂದು ನುಡಿದರು.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**